**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 01 (20) |
| ಸದಸ್ಯರ ಹೆಸರು | ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 04/07/2023 |
| ಉತ್ತರಿಸುವವರು | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ. |
|---|---|---|
| ಅ) | ರಾಜ್ಯಾದ್ಯಾಂತ ಪಟ್ಟಣ ಪಂಚಾಯಿತಿಗಳಲ್ಲಿ ವಿನ್ಯಾಸ ನಕ್ಷೆ ಮತ್ತು ಫಾರಂ ನಂ-3 ನೀಡಲು ಇರುವ ಸಮಸ್ಯೆಗಳೇನು; ಇದರಿಂದಾಗಿ ರಾಜ್ಯದ ಸಾವಿರಾರು ಜನರಿಗೆ ಭೂ-ಪರಿವರ್ತನೆಗೆ ಮತ್ತು ಕಟ್ಟಡ ನಿರ್ಮಾಣಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ವಿನ್ಯಾಸ ನಕ್ಷೆಯನ್ನು ನೀಡಲಾಗುತ್ತಿದೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 7 ಟಿಟಿಪಿ 2017, ದಿನಾಂಕ: 22.03.2017ರಂತೆ(ಅನುಬಂಧ-1) ನಗರಾಭಿವೃದ್ಧಿ ಪ್ರಾಧಿಕಾರ/ಯೋಜನಾ ಪ್ರಾಧಿಕಾರ/ಪುರಸಭೆ ಯೋಜನಾ ಪ್ರಾಧಿಕಾರದಿಂದ ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ವಿನ್ಯಾಸ ಅನುಮೋದನೆ ಪಡೆದಿರುವ ಹಾಗೂ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: 23350 ಡಿಎಂಎ 121 ಜಿಪಿಎಸ್ 2017-18, ದಿನಾಂಕ: 05.01.2018ರನ್ವಯ (ಅನುಬಂಧ-2) ಪಟ್ಟಣ ಪಂಚಾಯಿತಿಗಳಿಗೆ ಫಾರಂ ನಂ-3 ನೀಡಲಾಗುತ್ತಿದೆ, ವಿನ್ಯಾಸ ಅನುಮೋದನೆಯಾಗದಿರುವ ನಿವೇಶನಗಳಿಗೆ ಫಾರಂ-3 ನೀಡಲಾಗುತ್ತಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಈ ಕುರಿತಂತೆ ಸರ್ಕಾರವು ಕೈಗೊಂಡ ಕ್ರಮಗಳೇನು;<br>(ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 203 ಜಿಇಎಲ್ 2022, ದಿನಾಂಕ:02.01.2023ರಲ್ಲಿ (ಅನುಬಂಧ-3) ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳು ದಿನಾಂಕ: 22.03.2017ರ ಪೂರ್ವದಲ್ಲಿ ತೆರೆದಿರುವ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಮುಂದುವರೆಸಲು ಹಾಗೂ ಸ್ಥಳೀಯ ಯೋಜನಾ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ಗ್ರಾಮ ಪಂಚಾಯತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿಸಿದ ತರುವಾಯ ಈ ಹಿಂದೆ ಗ್ರಾಮ ಪಂಚಾಯಿತಿಗಳು ಇ-ಸ್ವತ್ತು ತಂತ್ರಾಂಶದಡಿಯಲ್ಲಿ ನಿರ್ವಹಿಸಿದ ಖಾತೆಗಳನ್ನು ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ (ಬಿ.ಬಿ.ಎಂ.ಪಿ ಹೊರತು ಪಡಿಸಿ) ಮೇಲ್ಕಂಡ ಸುತ್ತೋಲೆಯಲ್ಲಿನ |

| | | |
|---|---|---|
| | | ಷರತ್ತುಗಳ ಅನ್ವಯ ಇ-ಆಸ್ತಿ ತಂತ್ರಾಂಶದಲ್ಲಿ ಖಾತ ವಿವರಗಳನ್ನು ದಾಖಲಿಸುವುದಕ್ಕೆ ಸರ್ಕಾರದಿಂದ ನಿರ್ದೇಶನ ನೀಡಲಾಗಿರುತ್ತದೆ ಹಾಗೂ ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ: DMA / DEV / OTH / 87 / 2022 C NO 925575, ದಿನಾಂಕ: 25.01.2023ರಲ್ಲಿ (ಅನುಬಂಧ-4) ಮೇಲ್ಕಂಡ ಸುತ್ತೋಲೆಯಲ್ಲಿನ ಅಂಶಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಕುರಿತು ಯೋಜನಾ ನಿರ್ದೇಶಕರುಗಳು. ರಾಜ್ಯದ ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳು ಮತ್ತು ಆಯುಕ್ತರುಗಳು, ರಾಜ್ಯದ 10 ಮಹಾನಗರ ಪಾಲಿಕೆಗಳಿಗೆ(ಬಿ.ಬಿ.ಎಂ.ಪಿ ಹೊರತು ಪಡಿಸಿ) ನಿರ್ದೇಶನ ನೀಡಲಾಗಿರುತ್ತದೆ |
| ಇ) | ಅನುಮತಿ ತಡೆಹಿಡಿದಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆದಾಯದ ಕೊರತೆಯಾಗುತ್ತಿದ್ದು ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು? | ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾದ ಪ್ರದೇಶಗಳಲ್ಲಿ ಬಂದಿರುವ ಅನಧಿಕೃತ ಬೆಳವಣಿಗೆಗಳನ್ನು ಸಕ್ರಮಗೊಳಿಸುವ ಸಂಬಂಧ ಸರ್ಕಾರವು ಅಧಿಸೂಚನೆ ಸಂಖ್ಯೆ: ನಅಇ 556 ಮೈಅಪ್ರಾ 2013(1). ದಿನಾಂಕ:28.05.2014ರಲ್ಲಿ ಅಕ್ರಮ-ಸಕ್ರಮ ನಿಯಮಗಳನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಗಳಿಗೆ ಘನ ಸರ್ವೋಚ್ಚ ನ್ಯಾಯಾಲಯವು ದಿನಾಂಕ:13.01.2017ರ ಆದೇಶದಲ್ಲಿ ದಿನಾಂಕ:28.05.2014 ರಂದು ಸರ್ಕಾರ ಹೊರಡಿಸಿರುವ ಅಕ್ರಮ-ಸಕ್ರಮ ನಿಯಮಗಳಡಿ ಸ್ವೀಕರಿಸಲಾಗಿರುವ ಅರ್ಜಿಗಳನ್ನು ಪರಿಶೀಲಿಸದಂತೆ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 19.03.2015ರಂದು ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ನು ಸರ್ವೋಚ್ಚ ನ್ಯಾಯಾಲಯದ ಮುಂದಿನ ತೀರ್ಪಿನವರೆಗೂ ಮುಂದುವರೆಸುವಂತೆ ಆದೇಶ ನೀಡಿರುತ್ತದೆ. ಅಕ್ರಮ-ಸಕ್ರಮ ನಿಯಮಗಳು ಜಾರಿಗೆ ಬಂದಲ್ಲಿ ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು. |

**ಇ-ಸಂಖ್ಯೆ: ನಅಇ 86 ಜಿಇಎಲ್ 2023**

(ರಹೀಂಖಾನ್)
ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು.

ಅನುಬಂಧ-1



ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 7 ಟಿಟಿಪಿ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 22.03.2017

Directorate of Municipal Admin
No.
Compilation
28 MAR 2017
AD Admin

## ಸುತ್ತೋಲೆ

ವಿಷಯ:- ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರ/ ಪುರಸಭೆ ಯೋಜನಾ ಪ್ರಾಧಿಕಾರದಿಂದ ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನೆ ಪಡೆಯದೇ ಇರುವ ವಿನ್ಯಾಸಗಳಲ್ಲಿನ ನಿವೇಶನಗಳಿಗೆ ಖಾತೆ ನೀಡುವ ಬಗ್ಗೆ.

ಉಲ್ಲೇಖ:-
1) ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಯುಡಿ 395 ಟಿಟಿಪಿ 91, ದಿನಾಂಕ: 07-08-1992.
2) ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂ: DMA/Eng/CR/200/86-87, ದಿನಾಂಕ:18-09-1992.
3) ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 104(2) ಬೆಂರೂಪ್ರಾ 2005, ದಿನಾಂಕ: 09-05-2005.
4) ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 556 ಮೈಅಪ್ರಾ 2013(1), ದಿನಾಂಕ: 28-05-2014.

*****

ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸದೇ ಇರುವ ಪ್ರದೇಶಗಳ ವ್ಯಾಪ್ತಿಯಲ್ಲಿ ವಿನ್ಯಾಸ ಅನುಮೋದನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಪಡೆಯಲು ಉಲ್ಲೇಖ (1), (2), (3)ರ ಪತ್ರ/ ಸುತ್ತೋಲೆಗಳಲ್ಲಿ ಸರ್ಕಾರದ ನಿರ್ದೇಶನಗಳಿರುತ್ತದೆ. ಆದಾಗ್ಯೂ ಇಂತಹ ಕ್ಷೇತ್ರಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅನುಮೋದನೆ ಪಡೆಯದೇ ಹಲವಾರು ಅನಧಿಕೃತ ಬಡಾವಣೆಗಳು ನಗರ ಪ್ರದೇಶಗಳಲ್ಲಿ ರಚಿತಗೊಂಡು ಇಂತಹ ವಿನ್ಯಾಸಗಳಿಗೆ ಅಗತ್ಯವಿರುವ ಅನುಮೋದನೆಗಳನ್ನು ಪಡೆಯುವ ಪೂರ್ವದಲ್ಲಿಯೇ ನಿವೇಶನಗಳಿಗೆ ಖಾತೆಗಳನ್ನು ನೀಡುವ ಕ್ರಮವು ಸಮಂಜಸವಾಗಿರುವುದಿಲ್ಲ.

ನಗರ ಪ್ರದೇಶಗಳಲ್ಲಿ ಭೂ ಪರಿವರ್ತಿಸಿದ/ ಭೂ ಪರಿವರ್ತಿಸದ ಜಮೀನುಗಳಿಗೆ ವಿನ್ಯಾಸ ಅನುಮೋದನೆ ಪಡೆಯದೇ ಅನಧಿಕೃತ ಬಡಾವಣೆ/ರೆವೆನ್ಯೂ ಬಡಾವಣೆಗಳನ್ನು ನಿರ್ಮಾಣ ಮಾಡಿ, ನಿವೇಶನಗಳನ್ನು ನೋಂದಣಿ ಮಾಡಿಕೊಂಡು ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಿಸುವುದರಿಂದಾಗುವ ಪ್ರತಿಕೂಲ ಪರಿಣಾಮಗಳನ್ನು ಗಮನಿಸಲಾಗಿ, ನಗರ ಪ್ರದೇಶಗಳಲ್ಲಿ ಉದ್ಯಾನವನ/ ಬಯಲುಜಾಗಗಳ ಕೊರತೆ, ನಾಗರೀಕ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ವಿಫಲತೆ, ವ್ಯವಸ್ಥಿತವಾದ ರಸ್ತೆಯ ಪರಿಚಲನೆ, ಮೂಲಭೂತ ಸೌಕರ್ಯದ ಕೊರತೆ ಹಾಗೂ ಯೋಜಿತ ಬೆಳವಣಿಗೆಗಳಲ್ಲಿ ತೊಡಕುಗಳಿರುವುದು ಕಂಡುಬರುತ್ತದೆ. ಇಂತಹ ಬೆಳವಣಿಗೆಗಳಿಗೆ ಅವಕಾಶ ಕಲ್ಪಿಸದೇ, ಅಭಿವೃದ್ಧಿ ಬೆಳವಣಿಗೆಗಳಲ್ಲಿ ಪಾರದರ್ಶಕತೆ, ಸಾರ್ವಜನಿಕ ಹಿತದೃಷ್ಟಿ ಹಾಗೂ ನಾಗರೀಕ ಸ್ನೇಹಿ ಸುಧಾರಣೆಗಳನ್ನು ತರಲು ಸರ್ಕಾರದ ಹಂತದಲ್ಲಿ ಕಾಯ್ದೆಗಳಿಗೆ ತಿದ್ದುಪಡಿ, ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ.

ಇದಕ್ಕೆ ಪೂರಕವಾಗುವಂತೆ ವಿನ್ಯಾಸಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೇ ನಿವೇಶನಗಳನ್ನು ರಚಿಸಿ ಪರಭಾರೆ ಮಾಡುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ತಡೆಯುವ ಅವಶ್ಯವಿರುತ್ತದೆ. ಹಾಗೂ ದಿನಾಂಕ:19-10-2013ರ ಮುಂಚಿತವಾಗಿ ಬಂದಿರುವ ಅನಧಿಕೃತ ಬೆಳವಣಿಗೆಗಳನ್ನು ಸಕ್ರಮಗೊಳಿಸುವ ಕುರಿತು ಉಲ್ಲೇಖ (4)ರ ಅಧಿಸೂಚನೆಯಲ್ಲಿ ನಿಯಮಗಳನ್ನು ರಚಿಸಲಾಗಿದ್ದು, ಜಾರಿಗೊಳಿಸಬೇಕಾಗಿರುತ್ತದೆ.

ಹಾಗಾಗಿ, ನಗರ ಸ್ಥಳೀಯ ಸಂಸ್ಥೆಗಳು ಇನ್ನು ಮುಂದೆ ಸಕ್ಷಮ ಪ್ರಾಧಿಕಾರಗಳಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆಯನ್ನು ನೀಡಬಾರದೆಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇಂತಹ ಕ್ರಮ ಕೈಗೊಳ್ಳದೇ ಖಾತೆಗಳನ್ನು ವಿತರಿಸಿದಲ್ಲಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಯ ಆಯುಕ್ತರು/ ಪೌರಾಯುಕ್ತರು/ ಮುಖ್ಯಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದು.

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ

**ಇವರಿಗೆ,**

1) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
2) ಎಲ್ಲಾ ಜಿಲ್ಲಾಧಿಕಾರಿಗಳು.
3) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.
4) ಆಯುಕ್ತರು, ಎಲ್ಲಾ ಮಹಾನಗರ ಪಾಲಿಕೆಗಳು.
5) ಆಯುಕ್ತರು, ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
6) ಸದಸ್ಯ ಕಾರ್ಯದರ್ಶಿಗಳು, ಎಲ್ಲಾ ಯೋಜನಾ ಪ್ರಾಧಿಕಾರಗಳು.
7) ಎಲ್ಲಾ ಪೌರಾಯುಕ್ತರು/ಮುಖ್ಯಾಧಿಕಾರಿಗಳು, ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ.
8) ಶಾಖಾ ರಕ್ಷಾ ಕಡತ.

ಅನುಬಂಧ-2

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು: 560001.

ಸಂಖ್ಯೆ: 23350 ಡಿಎಂಎ 121 ಜಿಪಿಎಸ್ 2017-18 ದಿನಾಂಕ:05.01.2018

**ಸುತ್ತೋಲೆ**

**ವಿಷಯ:** ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿಯಮಬಾಹಿರವಾಗಿ ತೆರೆದಿರುವ ಖಾತೆಗಳನ್ನು ರದ್ದುಪಡಿಸುವ ಕುರಿತು.

**ಉಲ್ಲೇಖ** : ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇಲ್ಲಿ ಪ್ರಕರಣ ಸಂ: ಕಂಪ್ಲೆಂಟ್/ಉಪಲೋಕ್/ಬಿಡಿ-4551/ಡಿಆರ್ಇ-5

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಉಪಲೋಕಾಯುಕ್ತರು ರವರೊಂದಿಗೆ ದಿನಾಂಕ.26.12.2017 ರಂದು ನಡೆದ ವಿಚಾರಣೆಯಲ್ಲಿ ರಾಮನಗರ ನಗರಸಭೆಯಲ್ಲಿ ಸುಮಾರು 1909 ನಿಯಮಬಾಹಿರ ಖಾತೆ ದಾಖಲೆಗಳ ಬಗ್ಗೆ ಪ್ರಸ್ತಾಪಿಸಿದ್ದು, ಈ ರೀತಿಯ ಪ್ರಕರಣಗಳು ರಾಜ್ಯದ ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲೂ ಇರುವುದಾಗಿ ತಿಳಿಸುತ್ತಾ, ಸದರಿ ನಿಯಮಬಾಹಿರ ಖಾತೆಗಳನ್ನು ಗುರುತಿಸಿ ನಿಯಮಾನುಸಾರ ರದ್ದುಪಡಿಸಲು ನಿರ್ದೇಶಿಸಿರುತ್ತಾರೆ.

ಸರ್ಕಾರದ ಆದೇಶ ಸಂ: ನಅಇ 7 ಟಿಟಿಪಿ 2017 ದಿನಾಂಕ.22.03.2017 ರಲ್ಲಿ ಸಕ್ಷಮ ಪ್ರಾಧಿಕಾರಗಳಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆಯನ್ನು ನೀಡಬಾರದೆಂದು ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿರುತ್ತದೆ. ಅಲ್ಲದೆ ಇನ್ನಿತರೆ ಹಲವು ಪ್ರಕರಣಗಳಲ್ಲಿ ನಿಯಮಬಾಹಿರವಾಗಿ ಖಾತಾ ವರ್ಗಾವಣೆ ಮಾಡುತ್ತಿರುವ ಕುರಿತು ಹಲವಾರು ದೂರುಗಳು ಸ್ವೀಕೃತವಾಗುತ್ತಿವೆ.

ಆದ್ದರಿಂದ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ನಿಯಮಬಾಹಿರ ಖಾತಾ ವರ್ಗಾವಣೆಗಳನ್ನು ಗುರುತಿಸಿ ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 322, ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ 1976ರ ಕಲಂ 114(ಎ), 102 ಮತ್ತು ಸರ್ಕಾರದ ಅಧಿಸೂಚನೆ ಸಂ:ನಅಇ 104 ಟಿಎಂಎಸ್ 2014 ದಿನಾಂಕ.09.01.2015 ಹಾಗೂ ಸರ್ಕಾರದ ಅಧಿಸೂಚನೆ ಸಂ:ಯುಡಿಡಿ 100 ಎಂಎನ್ಇ 2016 ದಿನಾಂಕ.17.04.2017ರನ್ವಯ ನಿಯಮಾನುಸಾರ ರದ್ದುಪಡಿಸಲು ಅಗತ್ಯ ಕ್ರಮಕೈಗೊಳ್ಳಲು ಆಯುಕ್ತರು/ ಪೌರಾಯುಕ್ತರು/ ಮುಖ್ಯಾಧಿಕಾರಿ ರವರಿಗೆ ಸೂಚಿಸಿದೆ.

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು

01. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
02. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
03. ಎಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದಿ ಕೋಶ ರವರಿಗೆ ಅಗತ್ಯ ಕ್ರಮಕ್ಕಾಗಿ.
04. ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು-ಮಹಾನಗರಪಾಲಿಕೆ/ನಗರಸಭೆ/ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ರವರಿಗೆ ಸೂಕ್ತ ಕ್ರಮಕ್ಕಾಗಿ
05. ಕಛೇರಿ ಪ್ರತಿ

Scanned by CamScanner

ಅನುಬಂಧ-3


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ - ೧<br>Part – I | ಬೆಂಗಳೂರು, ಸೋಮವಾರ, ೦೨, ಜನವರಿ, ೨೦೨೩(ಪುಷ್ಯ ೧೨, ಶಕವರ್ಷ, ೧೯೪೪)<br>BENGALURU, MONDAY, 02, JANUARY, 2023(PUSHYA , 12, SHAKAVARSHA, 1944) | ಸಂ. ೦೩<br>No. 03 |


## ಕರ್ನಾಟಕ ಸರ್ಕಾರ

ಸಂಖ್ಯೆ: UDD 203 GEL 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 02-01-2023.

## :: ಸುತ್ತೋಲೆ ::

**ವಿಷಯ:** ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳು ದಿನಾಂಕ 22.03.2017 ರ ಪೂರ್ವದಲ್ಲಿ ತೆರೆದಿರುವ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಮುಂದುವರೆಸಲು ಹಾಗೂ ಸ್ಥಳೀಯ ಯೋಜನಾ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿಸಿದ ತರುವಾಯ ಈ ಹಿಂದೆ ಗ್ರಾಮ ಪಂಚಾಯಿತಿಗಳು ಇ-ಸ್ವತ್ತು ತಂತ್ರಾಂಶದಡಿಯಲ್ಲಿ ನಿರ್ವಹಿಸಿದ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ (ಬಿ.ಬಿ.ಎಂ.ಪಿ. ಹೊರತುಪಡಿಸಿ) ನಿರ್ದೇಶನ ನೀಡುವ ಬಗ್ಗೆ.

**ಉಲ್ಲೇಖ:**

1. ಗ್ರಾಮೀಣ ಪ್ರದೇಶಗಳಲ್ಲಿ ಇ-ಸ್ವತ್ತು ಮತ್ತು ನಗರ ಪ್ರದೇಶಗಳಲ್ಲಿ ಇ-ಖಾತಾ ನೀಡುವ ಕುರಿತು ಪರಾಮರ್ಶಿಸಲು ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಸಭೆ ದಿನಾಂಕ: 20.08.2020 ಮತ್ತು 11.05.2022 ರ ಚರ್ಚೆ.
2. ಪೌರಾಡಳಿತ ನಿರ್ದೇಶಕರ ಸುತ್ತೋಲೆ ಸಂಖ್ಯೆ: 23350 ಡಿಎಂಎ 121 ಜಿಪಿಎಸ್ 2017-18, ದಿನಾಂಕ 05.01.2018.
3. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 7 ಟಿಟಿಪಿ 2017, ದಿನಾಂಕ 22.03.2017.
4. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಸುತ್ತೋಲೆ ಸಂಖ್ಯೆ: DMA 29 PTIS/2015-16, ದಿನಾಂಕ 20.04.2016.

*******

ಉಲ್ಲೇಖ (1) ರಂತೆ ಗ್ರಾಮೀಣ ಪ್ರದೇಶಗಳಲ್ಲಿ ಇ-ಸ್ವತ್ತು ಮತ್ತು ನಗರ ಪ್ರದೇಶಗಳಲ್ಲಿ ಇ-ಖಾತಾ ನೀಡುವ ಕುರಿತು ಪರಾಮರ್ಶಿಸಲು ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಸಭೆಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಉಲ್ಲೇಖ (3) ರ ಸರ್ಕಾರದ ದಿನಾಂಕ 22.03.2017 ರ ಸುತ್ತೋಲೆ ಹೊರಡಿಸುವ ಪೂರ್ವದಲ್ಲಿ ತೆರೆದಿರುವ ಖಾತಾಗಳನ್ನು ಇ-ಆಸ್ತಿ ತಂತ್ರಾಂಶದಡಿ ಮುಂದುವರೆಸುವ ಬಗ್ಗೆ ಹಾಗೂ ಗ್ರಾಮ ಪಂಚಾಯಿತಿಗಳು ಇ-ಸ್ವತ್ತು ತಂತ್ರಾಂಶದಡಿಯಲ್ಲಿ

ನಿರ್ವಹಿಸಿರುವ ಖಾತೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಗೊಂಡ ನಂತರ ಇ-ಆಸ್ತಿ ತಂತ್ರಾಂಶದಲ್ಲಿ ಮುಂದುವರೆಸುವ ಬಗ್ಗೆ ಚರ್ಚಿಸಲಾಗಿರುತ್ತದೆ.

ಉಲ್ಲೇಖ (2)ರ ಪೌರಾಡಳಿತ ನಿರ್ದೇಶಕರ ಸುತ್ತೋಲೆಯಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ನಿಯಮಬಾಹಿರ ಖಾತಾ ವರ್ಗಾವಣೆಗಳನ್ನು ಗುರುತಿಸಿ ನಿಯಮಾನುಸಾರ ರದ್ದುಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿ ರವರಿಗೆ ಸೂಚಿಸಲಾಗಿದೆ.

ಉಲ್ಲೇಖ (3)ರ ಸರ್ಕಾರದ ಸುತ್ತೋಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಇನ್ನು ಮುಂದೆ ಸಕ್ಷಮ ಪ್ರಾಧಿಕಾರಗಳಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆ ನೀಡಬಾರದೆಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಉಲ್ಲೇಖ (4)ರ ಸುತ್ತೋಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮಹಾನಗರ ಪಾಲಿಕೆಗಳು ವ್ಯವಸ್ಥಿತವಾಗಿ ಇ-ಆಸ್ತಿ ತಂತ್ರಾಂಶದಲ್ಲಿ ಅಧಿಕೃತ ಆಸ್ತಿಗಳನ್ನು ಹಾಗೂ ಅಧಿಕೃತವಲ್ಲದ ಆಸ್ತಿಯ ಮಾಹಿತಿಗಳನ್ನು ದಾಖಲಿಸುವ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿದೆ.

ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಅಂಶಗಳು ಅನ್ವಯವಾಗುತ್ತವೆ.

ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದೇ ಇರುವ ಪ್ರದೇಶಗಳಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉಲ್ಲೇಖ (3) ರ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ನಗರ ಸ್ಥಳೀಯ ಸಂಸ್ಥೆಗಳು ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೇ ರಚಿಸಲಾಗಿರುವ ನಿವೇಶನಗಳಿಗೆ ಖಾತೆ ನೀಡಲು ಅವಕಾಶವಿರುವುದಿಲ್ಲ.

ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದೇ ಇರುವ ಪ್ರದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತೆರೆದಿರುವ ಖಾತೆಗಳನ್ನು ಹಾಗೂ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದೇ ಇರುವ ಪ್ರದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಗೊಂಡ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ, ನಗರಾಭಿವೃದ್ಧಿ ಇಲಾಖೆಯ ನಿರ್ದೇಶನಗಳು ಪರಿವರ್ತನೆಗೊಂಡ ದಿನಾಂಕದಿಂದ ಅನ್ವಯವಾಗುವುದರಿಂದ, ಇದಕ್ಕೆ ಪೂರ್ವದಲ್ಲಿ ಗ್ರಾಮ ಪಂಚಾಯಿತಿಗಳ ವತಿಯಿಂದ ಇ-ಸ್ವತ್ತು ತಂತ್ರಾಂಶದಡಿ ತೆರೆಯಲಾದ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಉಲ್ಲೇಖ (4) ರ ಸುತ್ತೋಲೆಯ ನಿರ್ದೇಶನದನ್ವಯ ಕೆಳಕಂಡ ಷರತ್ತುಗಳಿಗೊಳಪಟ್ಟು (ಬಿ.ಬಿ.ಎಂ.ಪಿ. ಹೊರತುಪಡಿಸಿ) ದಾಖಲಿಸುವಂತೆ ಸೂಚಿಸಿದೆ.

**ಷರತ್ತುಗಳು:-**

1. ಗ್ರಾಮ ಪಂಚಾಯಿತಿಯ ಇ-ಸ್ವತ್ತು ಆಸ್ತಿಗಳನ್ನು ಡಿಜಿಟಲೀಕರಣ ಮಾಡುವಾಗ ಅಧಿಕೃತ ಮತ್ತು ಅನಧಿಕೃತ ಆಸ್ತಿಗಳ ವರ್ಗೀಕರಣ ಮಾಡಲು ಪೌರಾಡಳಿತ ನಿರ್ದೇಶನಾಲಯದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ನಿವೇಶನ / ಆಸ್ತಿಗಳು ಸರ್ಕಾರಿ ಸಂಸ್ಥೆಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಜಮೀನಾಗಿದ್ದಲ್ಲಿ, ಕೆರೆ, ನಾಲಾ ಉದ್ಯಾನವನ ಮುಂತಾದ ಪ್ರದೇಶಗಳಲ್ಲಿ ಬರುತ್ತಿದ್ದಲ್ಲಿ, ಅಂತಹ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸತಕ್ಕದ್ದಲ್ಲ.

3. ಅಭಿವೃದ್ಧಿಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯು ಚಾಲ್ತಿಯಲ್ಲಿರುವ ನಗರ ಯೋಜನಾ ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆ ಮತ್ತು ನಿಯಮಗಳಲ್ಲಿನ ಅಂಶಗಳಿಗೆ ಒಳಪಟ್ಟಿರುತ್ತದೆ.
4. ಜಮೀನುಗಳು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆಯಾಗಿರತಕ್ಕದ್ದು.
5. ನಿವೇಶನ / ಆಸ್ತಿಗಳಿಗೆ ವಸತಿ ಉಪಯೋಗಕ್ಕೆ ಇದ್ದಲ್ಲಿ, ಕನಿಷ್ಠ 6ಮೀ. ಅಗಲ ಹಾಗೂ ವಾಣಿಜ್ಯ ಅಥವಾ ಕೈಗಾರಿಕಾ ಉಪಯೋಗಕ್ಕೆ ಇದ್ದಲ್ಲಿ, ಕನಿಷ್ಠ 12ಮೀ. ಅಗಲದ ರಸ್ತೆಯಿಂದ ಸಂಪರ್ಕ ಹೊಂದಿರತಕ್ಕದ್ದು.
6. ಇ-ಆಸ್ತಿ ತಂತ್ರಾಂಶದಡಿ ಎಲ್ಲಾ ಆಸ್ತಿಗಳ ಮಾಹಿತಿಗಳನ್ನು ದಾಖಲಿಸುವ ಪೂರ್ವದಲ್ಲಿ ಭೌತಿಕವಾಗಿ ನಿರ್ವಹಿಸುತ್ತಿದ್ದ (MAR-19 (Municipal Assessment Register), PTR (Property Tax Register), KMF 24 Register) ಖಾತೆಯ ವಹಿಗಳನ್ನು ಕಡ್ಡಾಯವಾಗಿ scan ಮಾಡಿ ಪೌರಾಡಳಿತ ನಿರ್ದೇಶನಾಲಯ / KMDS ಗೆ ಸಲ್ಲಿಸತಕ್ಕದ್ದು ಮತ್ತು ಸ್ಥಳೀಯ ಸಂಸ್ಥೆಗಳ website ನಲ್ಲಿ upload ಮಾಡತಕ್ಕದ್ದು.
7. ಇ-ಆಸ್ತಿ ದಾಖಲಿಸುವಿಕೆಯನ್ನು ನಗರ ಯೋಜನಾ ಕಾಯ್ದೆ ಅಥವಾ ನಿಯಮಗಳಿಗೆ ವ್ಯತಿರಿಕ್ತವಾಗಿರುವ ಅನಧಿಕೃತ ವಿನ್ಯಾಸ ಅಥವಾ ನಿರ್ಮಾಣಗಳ ಸಕ್ರಮಗೊಳಿಸುವಿಕೆ/ ಕ್ರಮಬದ್ಧಗೊಳಿಸುವಿಕೆ ಎಂದು ಅರ್ಥೈಸತಕ್ಕದಲ್ಲ.
8. ಇ-ಖಾತಾ ದಾಖಲಿಸುವಿಕೆಯು ಈಗಾಗಲೇ ದಾಖಲಾಗಿರುವ ವಿವರಗಳನ್ನು ಮಾತ್ರ ಸೂಚಿಸುತ್ತಿದ್ದು, ಇದು ಪ್ರಶ್ನಿತ ಆಸ್ತಿಯ ಮೇಲೆ ಯಾವುದೇ ಹಕ್ಕು ಸ್ಥಾಪನೆ ನೀಡುವುದಿಲ್ಲ (Does not confer any right, title or interest over the said property).
9. ಅನಧಿಕೃತ ಆಸ್ತಿಗಳನ್ನು ಡಿಜಿಟಲೀಕರಣ ಮಾಡುವ ಪ್ರಕ್ರಿಯೆಯು ಆಡಳಿತಾತ್ಮಕ ಉದ್ದೇಶಗಳಿಗೆ ಮಾತ್ರ ಸೀಮಿತವಾಗಿದ್ದು, ಅಧಿಕೃತ ಆಸ್ತಿಗಳೊಂದಿಗೆ ಇವುಗಳನ್ನು ಕಾನೂನಾತ್ಮಕವಾಗಿ ಸಮೀಕರಣಗೊಳಿಸತಕ್ಕದ್ದಲ್ಲ (shall not be equated in legal statues to the Authorized properties). ಅದರಂತೆ, ಡಿಜಿಟಲೀಕರಣಗೊಂಡ ಅನಧಿಕೃತ ಆಸ್ತಿಗಳ ಖಾತೆಯಲ್ಲಿ ಸೂಕ್ತ ಷರಾ ದಾಖಲಿಸತಕ್ಕದ್ದು.
10. ಇ-ಖಾತಾ ದಾಖಲಿಸುವಿಕೆಯು ಹಣಕಾಸಿನ ಅಂಶಗಳ ನಿರ್ಣಯಕ್ಕಾಗಿ ಮಾತ್ರವಾಗಿದ್ದು ಅದು ಸಂಬಂಧಪಟ್ಟ ಖಾತೆದಾರರಿಗೆ ಯಾವುದೇ ಕಾನೂನುಬದ್ಧ ಹಕ್ಕನ್ನು ನೀಡುವುದಿಲ್ಲ.
11. ಇ-ಖಾತಾ ದಾಖಲಿಸುವಿಕೆಯು KTCP ಕಾಯಿದೆಯ ಕಲಂ 76 ಗೆ ವ್ಯತಿರಿಕ್ತವಾದ ಯಾವುದೇ ನಿರ್ಮಾಣ ಅಥವಾ ವಾಸವನ್ನು (occupancy) ಯಾವುದೇ ರೀತಿಯಲ್ಲಿ ದೃಢೀಕರಿಸುವುದಿಲ್ಲ.
12. ಈ ಸುತ್ತೋಲೆಯಲ್ಲಿ ತಿಳಿಸಿರುವ ಅಂಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಹಾಗೂ ಏನಾದರೂ ಗೊಂದಲಗಳು ಉಂಟಾದಲ್ಲಿ ಬಗೆಹರಿಸಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಕ್ರ. ಸಂ | ಅಧಿಕಾರಿಯ ವಿವರ | ನಿರ್ವಹಿಸಬೇಕಾದ ಜವಾಬ್ದಾರಿ |
|---|---|---|
| 1. | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ | ಸದಸ್ಯ ಕಾರ್ಯದರ್ಶಿ |
| 3 | ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಪೌರಾಯುಕ್ತರು/ ಮುಖ್ಯಾಧಿಕಾರಿಗಳು. | ಸದಸ್ಯರು |
| 4 | ಸಂಬಂಧಿಸಿದ ಜಿಲ್ಲೆಯ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು. | ಸದಸ್ಯರು |
| 5 | ಕಾರ್ಯನಿರ್ವಹಣಾ ಅಧಿಕಾರಿ, ಸಂಬಂಧಿಸಿದ ತಾಲ್ಲೂಕು ಪಂಚಾಯಿತಿ | ಸದಸ್ಯರು |

ಈ ಸುತ್ತೋಲೆಯ ಅಂಶಗಳು ಇ-ಆಸ್ತಿ ತಂತ್ರಾಂಶದಲ್ಲಿ ಖಾತಾ ವಿವರಗಳನ್ನು ದಾಖಲಿಸುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ.

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಎಂ.ಎ-2 ಮತ್ತು ಮಂಡಳಿ)

ಮುದ್ರಕರು ಹಾಗೂ ಪ್ರಕಾಶಕರು- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE

ಅನುಬಂಧ-4

DMA/DEV/KHTA/10/2023-DMA_DEV-DIRECTORATE OF MUNICIPAL ADMINISTRATION

'376970/2023


ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001


ಸಂಖ್ಯೆ: DMA/DEV/OTH/87/2022 CNO: 925575

ದಿನಾಂಕ: 25.01.2023

ಇವರಿಗೆ,

1. ಯೋಜನಾ ನಿರ್ದೇಶಕರು
   ರಾಜ್ಯದ ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳು

2. ಆಯುಕ್ತರು.
   ರಾಜ್ಯದ 10 ಮಹಾನಗರ ಪಾಲಿಕೆಗಳು

ಮಾನ್ಯರೇ,

ವಿಷಯ: ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳು ದಿನಾಂಕ: 22.03.2017ರ ಪೂರ್ವದಲ್ಲಿ ತೆರೆದಿರುವ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಮುಂದುವರೆಸಲು ಹಾಗೂ ಸ್ಥಳೀಯ ಯೋಜನಾ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಮೇಲ್ದರ್ಜೇಗೇರಿಸಿದ ತರುವಾಯ ಈ ಹಿಂದೆ ಗ್ರಾಮ ಪಂಚಾಯಿತಿಗಳು ಇ-ಸ್ವತ್ತು ತಂತ್ರಾಂಶದಡಿಯಲ್ಲಿ ನಿರ್ವಹಿಸಿದ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸುವ ಕುರಿತು.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: UDD 203 GEL 2022 ದಿನಾಂಕ: 02-01-2023.

*******

ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳು ದಿನಾಂಕ: 22.03.2017ರ ಪೂರ್ವದಲ್ಲಿ ತೆರೆದಿರುವ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಮುಂದುವರೆಸಲು ಹಾಗೂ ಸ್ಥಳೀಯ ಯೋಜನಾ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಮೇಲ್ದರ್ಜೇಗೇರಿಸಿದ ತರುವಾಯ ಈ ಹಿಂದೆ ಗ್ರಾಮ ಪಂಚಾಯಿತಿಗಳು ಇ-ಸ್ವತ್ತು ತಂತ್ರಾಂಶದಡಿಯಲ್ಲಿ ನಿರ್ವಹಿಸಿದ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸುವ ಕುರಿತು ಕೆಲವು ಷರತ್ತುಗಳನ್ನು ವಿಧಿಸಿ ನಗರ ಸ್ಥಳೀಯ ಸಂಸ್ಥೆಗಳಿಗೆ ಉಲ್ಲೇಖಿತ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ. ಹಾಗೂ ಈ ಕುರಿತು ಏನಾದರೂ ಗೊಂದಲಗಳು ಉಂಟಾದಲ್ಲಿ ಪರಿಹರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಪ್ರತಿಯನ್ನು ಲಗತ್ತಿಸಿದೆ. ಸುತ್ತೋಲೆಯ ಅಂಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಕುರಿತು ಯೋಜನಾ ನಿರ್ದೇಶಕರು ತಮ್ಮ ಅಧೀನದ ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ಪಷ್ಟ ನಿರ್ದೇಶನ ನೀಡಲು ಕೋರಿದೆ.

ತಮ್ಮ ವಿಶ್ವಾಸಿ

**Signed by N Manjushree**
**Date: 25-01-2023 18:48:38**

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು